# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಗೃಹ ಮಂಡಳಿಯ 2011-12ನೇ ಸಾಲಿನ 53 ವಸತಿ ಯೋಜನೆಗಳಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: ಕರ್ನಾಟಕ ಗೃಹ ಮಂಡಳಿಯ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ. ಕಗೃಮಂ/ಜನಿಯೋ/ವಯೋ/19/72/2011-12, ದಿನಾಂಕ: 14/15-06-2011, 13-09-2011, 21-09-2011, 29-06-2012 ಮತ್ತು 01-08-2012.

**ಪ್ರಸ್ತಾವನೆ:**

ಆಯುಕ್ತರು, ಕರ್ನಾಟಕ ಗೃಹ ಮಂಡಳಿ ಅವರು ಮೇಲೆ ಓದಲಾದ ಪತ್ರಗಳಲ್ಲಿ ಪ್ರಸ್ತಾವನೆ ಸಲ್ಲಿಸುತ್ತಾ, 2010-11ನೇ ಸಾಲಿನಲ್ಲಿ ಕರ್ನಾಟಕ ಗೃಹ ಮಂಡಳಿಯು ರಾಜ್ಯಾದ್ಯಂತ 225 ವಸತಿ ಯೋಜನೆಯಡಿ ರೂ.30870.98 ಕೋಟಿಗಳ ಅಂದಾಜು ವೆಚ್ಚದಲ್ಲಿ 131051 ಮನೆಗಳನ್ನು ಮತ್ತು 305786 ನಿವೇಶನಗಳನ್ನು ನಿರ್ಮಿಸಲು ಸರ್ಕಾರಿ ಆದೇಶ ಸಂಖ್ಯೆ.ವಇ 102 ಕಗೃಮಂ 2010,ದಿನಾಂಕ:18-5-2010ರಲ್ಲಿ ಅನುಮೋದನೆ ನೀಡಲಾಗಿತ್ತು. ಸರ್ಕಾರ ಅನುಮೋದಿಸಿರುವ 225 ಸ್ಥಳಗಳ ಪೈಕಿ ಎಲ್ಲಾ ಸ್ಥಳಗಳಲ್ಲಿ ಯೋಜನೆ ಕೈಗೊಳ್ಳುವುದು ಸಾಧ್ಯವಾಗುತ್ತಿಲ್ಲ. ದಿನಾಂಕ:18-4-2011 ಮತ್ತು 31-5-2011ರ ಮಂಡಳಿ ಸಭೆಗಳಲ್ಲಿ 225 ಸ್ಥಳಗಳ ಪೈಕಿ, 13 ಸ್ಥಳಗಳಲ್ಲಿನ ಯೋಜನೆಗಳನ್ನು ಬದಲಿ ಸ್ಥಳಗಳಲ್ಲಿ ಕೈಗೊಳ್ಳಲು ಹಾಗೂ ದಿನಾಂಕ:31-05-2011ರ ಮಂಡಳಿ ಸಭೆಯ ನಿರ್ಣಯದನ್ವಯ 32 ಸ್ಥಳಗಳಲ್ಲಿ 2011-12ನೇ ಸಾಲಿಗೆ ವಸತಿ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಿ ಸರ್ಕಾರದ ಅನುಮೋದನೆ ಕೋರಿದ್ದರು. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈಗಾಗಲೇ ಅನುಮೋದಿತ ಯೋಜನೆಗಳನ್ನು ಪರಿಷ್ಕರಿಸದೇ, ಕಾರ್ಯಸಾಧ್ಯವಾಗುವಂತಹ ಹೊಸ ಯೋಜನೆಗಳನ್ನು ಕೈಗೊಳ್ಳಲು ಪರಿಶೀಲಿಸುವಂತೆ ಕೋರಲಾಗಿತ್ತು. ಆ ಹಿನ್ನೆಲೆಯಲ್ಲಿ, ಕರ್ನಾಟಕ ಗೃಹ ಮಂಡಳಿಯ ಆಯುಕ್ತರು ದಿನಾಂಕ:29-06-2012ರ ಪತ್ರದ ಮೂಲಕ ಮರು ಪ್ರಸ್ತಾವನೆ ಸಲ್ಲಿಸಿ, 53 ವಸತಿ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಿ ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ.

ಆಯುಕ್ತರು, ಕರ್ನಾಟಕ ಗೃಹ ಮಂಡಳಿ ಅವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲು ನಿರ್ಣಯಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ.ವಇ 248ಕಗೃಮಂ 2011,**
**ಬೆಂಗಳೂರು, ದಿನಾಂಕ:04-09-2012.**

ಮೇಲಿನ ಪ್ರಸ್ತಾವನೆಯ ಹಿನ್ನೆಲೆಯಲ್ಲಿ, ಕರ್ನಾಟಕ ಗೃಹ ಮಂಡಳಿಯು 2011-12ನೆ ಸಾಲಿಗೆ ಒಟ್ಟು ರೂ.788804.24 ಲಕ್ಷಗಳ ಅಂದಾಜು ಯೋಜನಾ ವೆಚ್ಚದಲ್ಲಿ, ಅನುಬಂಧ-1ರಲ್ಲಿ ತಿಳಿಸಲಾಗಿರುವ 53 ಸ್ಥಳಗಳಲ್ಲಿ ವಸತಿ ಯೋಜನೆಯನ್ನು, ಅನುಬಂಧ-2ರಲ್ಲಿ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅನುಷ್ಠಾನಗೊಳಿಸಲು ಕರ್ನಾಟಕ